

**human being** ಅವರ ಆತ್ಮವನ್ನು ಮುಟ್ಟುವ ಪ್ರಯತ್ನ. ಬೇರೆ ಯಾವ ಆಸಕ್ತಿಯೂ ನನಗಿಲ್ಲ. ನನ್ನ ಷೋ ಹಿಟ್ ಆಗಲು ಕಾರಣವೂ ಅದೇ. ಇಬ್ಬರು ದಿಗ್ಗಜರೂ ತುಂಬ ಸಹಕಾರ ನೀಡಿದ್ರು. ಕೆಲವರಂತೂ – ಸಿದ್ದರಾಮಯ್ಯ ಅವರನ್ನು ಈ ಕೋನದಿಂದ ಯಾರೂ ಈವರೆಗೆ ನೋಡೇ ಇಲ್ಲ.. – ಎಂದರು. ನನ್ನ ಉದ್ದೇಶವೂ ಅಷ್ಟೆ. ಅಲ್ಲಿ ಬಂದು ಕುಳಿತವರ ಒಳ್ಳೆಯತನವನ್ನು ತೋರಿಸುವುದು.

★ ಷೋನಲ್ಲಿ ಹೀಗೆ ಅವರಿಗೆ ಪ್ರಿಯವಾದದ್ದನ್ನು ಮಾತ್ರ ಕೇಳುವುದು ಎಷ್ಟು ಸರಿ? ಒಂದು ಸಂದರ್ಶನವಾಗಿ ಅದು ಅಪೂರ್ಣ ಅನ್ನಿಸುವುದಿಲ್ಲವೆ? ಉದಾಹರಣೆಗೆ ದರ್ಶನ್ ಅವರನ್ನು ಇದೇ ಸೀಟ್‌ನಲ್ಲಿ ಕುಳ್ಳಿರಿಸಿದಿರಿ. ಅವರ ಪತ್ನಿಯ ಬಗ್ಗೆ ಒಂದು ಪ್ರಸ್ತಾಪವೂ ಇಲ್ಲದೆ ಕಾರ್ಯಕ್ರಮ ಮುಗಿಸಿದಿರಿ..?

**ರಮೇಶ್:** ನಾನೇ ಹೇಳ್ತೀನಲ್ಲ, ಇದು 360 ಡಿಗ್ರಿ ಷೋ ಅಲ್ಲ, ಕೆಲವು ಡಿಗ್ರಿಗಳಷ್ಟು ಕಡಿಮೆ ಇದೆ ಅಂತ. ಅದನ್ನು ನಿರೀಕ್ಷಣಾ ಜಾಮೀನಿನಂತೆ ಮೊದಲೇ ಹೇಳಿಬಿಡುತ್ತೇನೆ. ನನ್ನ ಕಾರ್ಯಕ್ರಮದಲ್ಲಿ ಅತಿಥಿಗಳಿಗೆ ಹಿತವಾಗುವಂತಹ ಪ್ರಶ್ನೆಗಳನ್ನಷ್ಟೇ ಕೇಳುತ್ತೇನೆ. ಅವರ ಮನಸ್ಸನ್ನು ನೋಯಿಸಿ ನಾನೇನು ಮಾಡಲಿ? ನನ್ನ ಸ್ವಭಾವವೂ ಅದೇ. ನನ್ನ ಕಾರ್ಯಕ್ರಮದ ಮಿತಿಯೂ ಅದೇ. ಅದಕ್ಕೆ ಬೇರೆ ಚಾನೆಲ್‌ಗಳಿವೆ, ಷೋಗಳಿವೆ. ಎಲ್ರೂ ಅದನ್ನು ತೋರಿಸುತ್ತಾರೆ. ನನ್ನದು ಏನಿದ್ದರೂ ಪಾಸಿಟಿವ್ ಪ್ರಯತ್ನ. ಅವ್ರು ಏಕೆ ಸಾಧಕರಾದರು, ಹೇಗೆ ಸಾಧಕರಾದರು ಅನ್ನುವುದನ್ನು ತೋರಿಸೋದು. ನನ್ನದು ಜರ್ನಲಿಸ್ಟ್‌ಗಳ ತರಹದ ಸಂದರ್ಶನ ಅಲ್ಲ. ಅವರಂತೆ ನಾನು ಮಾಡುವುದೂ ಇಲ್ಲ, ನನ್ನಂತೆ ಅವರೂ ಮಾಡಬಾರದು. ಅವರ ಸಂದರ್ಶನಗಳಿಗೆ ಅದರದ್ದೇ ಆದ ತೂಕವಿದೆ.

★ ರಾಜಕೀಯದವರನ್ನು ತೋರಿಸಿದ ಬಗ್ಗೆ ಭಿನ್ನ ಅಭಿಪ್ರಾಯ ಬರಲಿಲ್ವೆ? ಕೆಲವರಿಗೆ ಇಷ್ಟ ಆಗ್ಲಿಲ್ಲ ಅನ್ನೋ ಮಾತಿದೆ.

**ರಮೇಶ್:** ಐ ಆ್ಯಮ್ ಟೋಟಲೀ ನ್ಯೂಟ್ರಲ್. ನನ್ನ ಬಗ್ಗೆ ಜನರಿಗೆ ಗೊತ್ತು. ಝೀ ಕನ್ನಡದ ಮುಖ್ಯಸ್ಥ ರಾಘವೇಂದ್ರ ಹುಣಸೂರು ಅವರಿಗೆ ನಾನು ಮೊದಲೇ ಹೇಳಿದ್ದೆ– ವೀಕೆಂಡ್ ವಿದ್ ರಮೇಶ್ ಒಂದು ಅಜೆಂಡಾದಿಂದ ಯಾವತ್ತೂ ನಡೀಬಾರ್ದು. ಹಾಗಾದ್ರೆ ನಿಲ್ಸಿಬಿಡೋಣ ಅಂತ. ಇಲ್ಲಿಗೆ ಬರೋವರೂ ಅಜೆಂಡಾ ಇಟ್ಕೊಬಾರ್ದು.

★ ಸಿದ್ರಾಮಯ್ಯ ಅವರ ಸಂದರ್ಶನ 'ಅಜೆಂಡಾ' ಅಂತ ನಿಮಗೆ ಅನಿಸಲಿಲ್ವಾ?

**ರಮೇಶ್:** ಖಂಡಿತಾ ಅನಿಸಿಲ್ಲ ಸಾರ್. ಅವರು ಮಾತನಾಡಿದ ರೀತಿ ಹಾಗಿತ್ತು. ಅವರು ಡಿಸೈಡ್ ಮಾಡಿದ್ದಿದ್ರೆ ತಮ್ಮನ್ನು ಇನ್ನಷ್ಟು ಚೆನ್ನಾಗಿ ಬ್ರ್ಯಾಂಡ್ ಮಾಡಬಹುದಿತ್ತು. ಆದರೆ ಅವರು ನಾವು ಪ್ರಶ್ನೆ ಕೇಳಿದ್ದಕ್ಕಷ್ಟೇ ಉತ್ತರ ಕೊಟ್ರು. ಪಾಲಿಟಿಸಿಯನ್ ತರಹ ಇರಲೇ ಇಲ್ಲ. ಇಲ್ಲಿ ಅವರ 'ಬಾಡಿ ಲಾಂಗ್ವೇಜ್' ನೋಡಿ. ಅವರ ಗೆಳೆಯರ ಬಗ್ಗೆ, ಕುಟುಂಬದ ಬಗ್ಗೆ ಎಲ್ಲವನ್ನೂ ಮುಕ್ತಮನದಿಂದ ಸಾಮಾನ್ಯನಂತೆ ಹಂಚಿಕೊಂಡರು. ನನ್ನ ಕಾರ್ಯಕ್ರಮದಲ್ಲಿ

(57ನೇ ಪುಟ ನೋಡಿ)